


## ಹಿಮಾಲಯದಿಂದ ಸೋಪ್

ಚಳಿಗಾಲದ ಶೀತಗಾಳಿ ಮತ್ತು ಕಡಿಮೆ ಆರ್ದ್ರತೆಯಿಂದ ಚರ್ಮವು ಒಣಗಿ ಮಕ್ಕಳಲ್ಲಿ ತುರಿಕೆ ಹೆಚ್ಚಾಗಿ ಚರ್ಮ ಕೆಂಪಗಾಗುತ್ತದೆ. ಇದರ ನಿವಾರಣೆಗಾಗಿ ಹಿಮಾಲಯ ಕಂಪೆನಿ ಇದೀಗ ಮಕ್ಕಳಿಗಾಗಿಯೇ ವಿವಿಧ ಹೊಸ ಬಗೆಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಇದರಲ್ಲಿ ಬೇಬಿ ಸೋಪ್, ಬೇಬಿ ತೈಲ ಉತ್ಪನ್ನ ಸೇರಿವೆ. ಸೂರ್ಯಕಾಂತಿ, ಆಲಿವ್ ಆಯಿಲ್, ಮುಂತಾದ ನೈಸರ್ಗಿಕ ವಸ್ತು ಬಳಸಿ ತಯಾರಿಸಲಾಗಿದೆ. ಇದರಿಂದ ಮಕ್ಕಳ ತ್ವಚೆ ಮೃದುವಾಗಿಡಲು ಸಹಕಾರಿಯಾಗುತ್ತದೆ ಎನ್ನುವುದು ಕಂಪೆನಿ ವಿವರಣೆ. 75ಗ್ರಾಂನ ಬೇಬಿ ಸೋಪ್ ಬೆಲೆ 35 ರೂಪಾಯಿ ಮತ್ತು 100 ಎಂಎಲ್‌ನ ಬೇಬಿ ಆಯಿಲ್ ಬೆಲೆ 85 ರೂಪಾಯಿ.

ವಿವರಕ್ಕೆ: 9886674959




## ಸನ್‌ಸಿಲ್ಕ್ ನ್ಯಾಚುರಲ್ ರಿಚಾರ್ಜ್

ಕೇಶ ಪೋಷಣೆಗಾಗಿ ಸನ್‌ಸಿಲ್ಕ್ ಕಂಪೆನಿ ಇದೀಗ ಹೊಸ ಉತ್ಪನ್ನವೊಂದನ್ನು ಬಿಡುಗಡೆ ಮಾಡಿದೆ. ಇದು ಬೇಸಿಗೆ, ಮಳೆ, ಚಳಿಗಾಲ.. ಹೀಗೆ ಎಲ್ಲ ಕಾಲಗಳಿಗೂ ಸೂಕ್ತವಾಗಿದ್ದು, ಕೂದಲನ್ನು ಚೆನ್ನಾಗಿ ಪೋಷಿಸುತ್ತದೆ. ಕೂದಲಿನ ಬುಡಭಾಗದ ಆರೋಗ್ಯ ಕಾಪಾಡಲು ಸಹಕಾರಿಯಾಗುತ್ತದೆ. ಕೂದಲು ಕಪ್ಪಾಗುವುದಲ್ಲದೆ ಸೊಂಪಾಗಿ ಬೆಳೆಯುವಂತೆ ಮಾಡುತ್ತದೆ.

ಸನ್‌ಸಿಲ್ಕ್ ನ್ಯಾಚುರಲ್ ರಿಚಾರ್ಜ್ ಹೆಸರಿನಲ್ಲಿರುವ ಇದು ಶಾಂಪು, ಕಂಡಿಷನರ್ ಎರಡೂ ವೈವಿಧ್ಯಗಳಿವೆ ಎನ್ನುವುದು ಕಂಪೆನಿ ವಿವರಣೆ. ಬೆಲೆ 80 ಎಂಎಲ್‌ಗೆ 64 ರೂಪಾಯಿ ಮತ್ತು 180 ಎಂಎಲ್‌ಗೆ 132 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

ಮಾಹಿತಿಗೆ: 9773518679




## ಇಂಡೋಲ ಕಲರ್ ಕಂಡಿಷನರ್

ಪುರುಷರಿಗಾಗಿ ಇಂಡೋಲ ಇದೀಗ ಕಲರ್ ಕಂಡೀಷನರ್ ಸೇರಿದಂತೆ ಹಲವು ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇನ್ನೊವ ಹೈಡ್ರೇಟ್, ಶಾಂಪು, ಇನ್ನೊವ ಕಲರ್, ಕಲರ್ ಶಾಂಪು ಇದರಲ್ಲಿ ಸೇರಿದೆ. ಈ ಉತ್ಪನ್ನಗಳನ್ನು ಬಳಸಿದರೆ ಪುರುಷರು ಪಾರ್ಲರ್‌ಗಳಿಗೆ ಹೋಗಬೇಕಾಗಿಲ್ಲ. ಮನೆಯಲ್ಲಿ ಸುಲಭವಾಗಿ ಕೇಶ ಸಂರಕ್ಷಣೆ ಮಾಡಿಕೊಳ್ಳಬಹುದು ಎನ್ನುತ್ತದೆ ಕಂಪೆನಿ. 100 ಎಂಎಲ್‌ಗೆ 120 ರೂಪಾಯಿ.

ಮಾಹಿತಿಗೆ: 7276586443

## ರಾಗ ಪರ್ಲ್ ಕೈಗಡಿಯಾರ

ವಾಚುಗಳಿಗೆ ಹೆಸರಾದ ಟೈಟಾನ್ ಕಂಪೆನಿ ರಾಗ ಪರ್ಲ್ ವಾಚುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ವಾಚುಗಳ ಚೈನ್‌ನಲ್ಲಿ ಮುತ್ತುಗಳನ್ನು ಅಳವಡಿಸಲಾಗಿದ್ದು ನೋಡಲೂ ಆಕರ್ಷಕವಾಗಿದೆ. ಮದುವೆ, ಮುಂಜಿಗಳಂತಹ ಶುಭ ಸಮಾರಂಭಗಳಲ್ಲಿ, ಸಂಜೆಯ ಪಾರ್ಟಿಗೆ ಹೋಗುವಾಗ, ಪ್ರೀತಿಪಾತ್ರರಿಗೆ ಉಡುಗೊರೆ ನೀಡಲು ಸೂಕ್ತವಾಗಿದೆ. ಮುತ್ತುಗಳನ್ನು ಕೂರಿಸಿದ ವಾಚು ಸೌಂದರ್ಯಕ್ಕೆ ಪೂರಕವಾಗಿದೆ ಎನ್ನುವುದು ಕಂಪೆನಿ ಮಾತು. ಬೆಲೆ 15,995 ರೂಪಾಯಿ. ಎಲ್ಲ ಟೈಟಾನ್ ಮಳಿಗೆಗಳಲ್ಲಿ ಸಿಗುತ್ತದೆ.

